ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
O.S. ನಂಬರಃ 45/2017

ಡಿ. ಡಬ್ಲ್ಯೂಃ 3

ದಿಃ 05-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ರಾಘವೇಂದ್ರ ರೇವಣಕರ |
| ತಂದೆಯ ಹೆಸರುಃ | ಮೋಹನ್ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ಅಕ್ಕಸಾಲಿಗ |
| ವಿಳಾಸಃ | ಧಾರವಾಡ |

ಮುಖ್ಯ ವಿಚಾರಣೆಃ 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ಸಾಕ್ಷಿಯು ನಿಡಿ-5 ಹಣ ಮುಟ್ಟಿದ ಬಗ್ಗೆ ಕರಾರು ಪತ್ರದ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಡಿ-5ಬಿ ಎಂದು ಗುರುತಿಸಲಾಯಿತು. ನಾನು ವಕೀಲರಾದ ಎಸ್ ಹೆಚ್ ನಾಯಕ ಇವರ ಮನೆಗೆ ಹೋಗಿದ್ದು, ಅಲ್ಲಿ ಪ್ರತಿವಾದಿಯರು ಮತ್ತು ನಾಗಮ್ಮ, ಲೀಲಾ ಮತ್ತು ಗಂಗಾ ಗೌಡ ಇವರೂ ಸಹ ಇದ್ದರು. ನಾನು ಸಹಿ ಹಾಕಿದ ಸಮಯದಲ್ಲಿ ಸಂಜೆ ಸುಮಾರು 4.30-5.00 ಗಂಟೆಯಾಗಿರುತ್ತದೆ. ನಾನು ಒಟ್ಟು ಮೋಕ್ತಿಯಾರನಾಮೆಗೆ ಸಹಿಯನ್ನು ಹಾಕಿರುತ್ತೇನೆ. ಸಾಕ್ಷಿಗೆ ನಿಡಿ-1 ಒಟ್ಟು ಮೋಕ್ತಿಯಾರನಾಮೆಯ ಮೇಲೆ ಮೊದಲು ನನ್ನ ಸಹಿ ಇರುವುದಿಲ್ಲ ಎಂದು ಹೇಳಿದ್ದು, ನಂತರ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಡಿ-1ಇ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಸ್ ಹೆಚ್ ನಾಯಕ ವಕೀಲರ ಮನೆಯಲ್ಲಿ ಮಾಡಿರುತ್ತೇನೆ. ಸಾಕ್ಷಿಯು ನಿಡಿ-1 ರ ಮೇಲೆ

ಅಂಟಿಸಿರುವ ಪೊಟೋಗಳಲ್ಲಿ ಇರುವ ವ್ಯಕ್ತಿಗಳ ಪರಿಚಯ ಮಾಡುತ್ತಾರೆ. ನಿಡಿ-1 ನ್ನು ವಕೀಲರ ಮನೆಯಲ್ಲಿಯೇ ಬರೆದಿರುತ್ತಾರೆ. ಎಸ್ ಹಚ್ ನಾಯಕ ಇವರು ದಸ್ತಾವೇಜಿನ ಮೇಲಿರುವ ವಿಷಯವನ್ನು ಓದಿ ಹೇಳಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಡಿ-1 ರ ಮೇಲಿರುವ ಪೊಟೋದಲ್ಲಿರುವ ವ್ಯಕ್ತಿಗಳು ಎಲ್ಲರೂ ಸಹ ವಕೀಲರ ಮನೆಯಲ್ಲಿಯೇ ಸಹಿಯನ್ನು ಮಾಡಿರುತ್ತಾರೆ. ನಿಡಿ-5 ರ ಮೇಲಿರುವ ಸಹಿಯನ್ನೂ ಸಹ ವಕೀಲರ ಮನೆಯಲ್ಲೆ ಮಾಡಿರುತ್ತೇನೆ. ನಿಡಿ-5 ರ ಮೇಲೆ ಮತ್ತೆ ಯಾರು ಸಹಿಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ, ಆದರೆ ಪರಿಚಯ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿಡಿ-1 ರ ಮೇಲೆ ಇರುವ ಪೊಟೋದಲ್ಲಿರುವ ವ್ಯಕ್ತಿಗಳು ನಿಡಿ-5 ಮಾಡುವ ಸಮಯದಲ್ಲಿ ಇದ್ದರು. ಅವರೂ ಸಹಿ ಮಾಡಿರುತ್ತಾರೆ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಡಿ-5 ಮಾಡುವ ಸಮಯದಲ್ಲಿ ಅದನ್ನು ಓದಿ ಹೇಳಲಾಗಿ 2ನೇ ಪ್ರತಿವಾದಿಯು ನಗದು ಹಣವನ್ನು ತಂದಿದ್ದು, ತಂದೆಯ ಮುಖಾಂತರ 3ನೇ ವಾದಿಗೆ ಕೊಟ್ಟಿರುತ್ತಾರೆ. ನಿಡಿ-5 ಇದನ್ನು ಸುಮಾರು ಮಧ್ಯಾಹ್ನ 3.30 ಗಂಟೆಗೆ ಬರೆದಿರಬಹುದು. ನಿಡಿ-1 ರ ಮೇಲಿರುವ ಪೊಟೊದಲ್ಲಿರುವ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ನೀವು ಎಷ್ಟು ವರ್ಷಗಳಿಂದ ಕಾರವಾರದಲ್ಲಿ ಬಂಗಾರ ಬೆಳ್ಳಿ ವ್ಯಾಪಾರ ಮಾಡಿಕೊಂಡು ಇರುತ್ತೀರಿ ಎಂದರೆ ಸಾಕ್ಷಿಯು ಕಾರವಾರದಲ್ಲಿ 2004 ರಿಂದ ಎಂದು ನುಡಿದಿದ್ದು, ನಂತರ ಕಾರವಾರದಲ್ಲಿ ಅಲ್ಲ, ಅಂಕೋಲಾದಲ್ಲಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ಧಾರವಾಡದಲ್ಲಿ ಬಂಗಾರ ಬೆಳ್ಳಿ ವ್ಯಾಪಾರ ಮಾಡಿಕೊಂಡು ಎಷ್ಟು

ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಸುಮಾರು ಎರಡೂವರೆ ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ನೀವು ಎಷ್ಟನೇ ಸಾಲಿನಲ್ಲಿ ನಿಡಿ–1 ಮತ್ತು 5 ಕಾಗದ ಪತ್ರಗಳ ಮೇಲೆ ಸಹಿಯನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿಯು ಒಂದನ್ನು 2015 ರಲ್ಲಿ ಹಾಗೂ ಇನ್ನೊಂದಕ್ಕೆ 2016 ರಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಕೀಲರಾದ ಎಸ್ ಹೆಚ್ ನಾಯಕ ಇವರ ಮನೆ ಬೋಳೆ ಗ್ರಾಮದಲ್ಲಿ ಇದ್ದು, 2015–16 ನೇ ಸಾಲಿನಲ್ಲಿ ಅವರ ಕಚೇರಿ ಕೆ ಸಿ ರಸ್ತೆಯ ಎಸ್ ಬಿ ಐ ಅಂಕೋಲಾ ಹತ್ತಿರ ಇತ್ತು ಎಂದರೆ ಸಾಕ್ಷಿಯು ನಾವು ಹೋದಾಗ ಅವರ ಮನೆಯಲ್ಲಿಯೇ ಕಚೇರಿ ಇತ್ತು ಎಂದು ನುಡಿಯುತ್ತಾರೆ. ಅಂಕೋಲಾದಲ್ಲಿ ಕೆ ಸಿ ರೋಡ್, ಅಂಕೋಲಾ ಹಾಗೂ ಬೋಳೆ ಗ್ರಾಮ ಬೇರೆ ಬೇರೆ ಎಂದರೆ ಸರಿ. ನೀವು ಸಹಿ ಮಾಡಿದ ನಿಡಿ–5 ದಸ್ತಾವೇಜಿನ ಮೇಲೆ ಯಾರು ಬರೆದಿರುತ್ತಾರೆ ಎಂದು ಅವರ ಸಹಿ ಅಥವಾ ಹೆಸರು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ–5 ರಲ್ಲಿ ಎಷ್ಟು ಹೆಬ್ಬೆಟ್ಟಿನ ಗುರುತುಗಳು ಇರುತ್ತವೆ ಎಂದರೆ ಸಾಕ್ಷಿಯು 2 ಎಂದು ನುಡಿಯುತ್ತಾರೆ. ನೀವು ವಾದಿಯರನ್ನು ಪ್ರಥಮವಾಗಿ ಎಲ್ಲಿ ನೋಡಿರುತ್ತೀರಿ ಎಂದರೆ ಸಾಕ್ಷಿಯು ಎಸ್ ಹೆಚ್ ನಾಯಕ ವಕೀಲರ ಮನೆಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಅವರನ್ನು ಕೊನೆಯದಾಗಿ ಯಾವಾಗ ನೋಡಿರುತ್ತೀರಿ ಎಂದರೆ ಸಾಕ್ಷಿಯು 2016 ನೇ ಸಾಲಿನಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಾಖಲಾತಿಗಳನ್ನು ತೋರಿಸಲಾಗಿ ಅದರಲ್ಲಿ ನೀವು ಸಹಿ ಮಾಡಿದ ಕಾಗದ ಪತ್ರಗಳ ಮೇಲೆ 2016 ಎಂದು ನಮೂದು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು 30ನೇ ತಾರೀಖಿಗೆ ಯಾವಾಗಲಾದರೂ ಹೋಗಿರುತ್ತೀರಾ ಎಂದರೆ ಸಾಕ್ಷಿಯು ದಿಃ30–03–2016 ರಂದು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದ ನಿಡಿ–5 ರ ಮೇಲೆ ಬೋಳೇ ಗ್ರಾಮದಲ್ಲಿ

ಇರುವ ವಕೀಲರ ಮನೆಯಲ್ಲಿ ಸಹಿ ಹಾಕಲಾಗಿದೆ ಎಂದು ಬರೆಯಲಾಗಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದ ಕಾಗದ ಪತ್ರಗಳನ್ನು ಓದಿ ನೋಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಓದಿರುವುದಿಲ್ಲ, ವಕೀಲರು ನಮ್ಮೆಲ್ಲರ ಮುಂದೆ ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸಹಿ ಮಾಡಿದ ವ್ಯಕ್ತಿಗಳಿಗೆ ಓದಲು ಬರೆಯಲು ಬರುತ್ತಿತ್ತಾ ಎಂದರೆ ಸಾಕ್ಷಿಯು ನಾಗಮ್ಮ ಇವರಿಗೆ ಬರಬಹುದು, ಉಳಿದವರಿಗೆ ಓದಲು ಬರೆಯಲು ಬರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲಾತಿಗಳ ಮೇಲೆ ಈ ಕೆಳಗಿನ ಸಾಕ್ಷಿದಾರರ ಸಮಕ್ಷಮ ಓದಿ, ಹೇಳಿ, ತಿಳಿಸಿ, ಸಹಿ ಪಡೆಯಲಾಗಿದೆ ಎಂದು ಬರೆಯಲಾಗಿದೆಯಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಸ್ತಾವೇಜನ್ನು ಟೈಪ್ ಮಾಡಬೇಕಾದರೆ ಸಹಿ ಹಾಕುತ್ತಾರಾ ಅಥವಾ ಬೆಬ್ಬಟ್ಟಿನ ಗುರುತನ್ನು ಹಾಕುತ್ತಾರಾ ಎಂದು ಗೊತ್ತಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಬರೆದುಕೊಟ್ಟವರಿಗೆ ನೀವು ಸಹಿ ಹಾಕುತ್ತೀರಾ ಅಥವಾ ಬೆಬ್ಬಟ್ಟಿನ ಗುರುತನ್ನು ಹಾಕುತ್ತೀರಾ ಎಂದು ಗೊತ್ತಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದೆ ಎಂದು ಹೇಳವ ಸಮಯದಲ್ಲಿ ಕಾಗದ ಪತ್ರದ ಮೇಲಿರುವ ಪೊಟೋದಲ್ಲಿರುವ ವ್ಯಕ್ತಿಗಳು ಎಸ್ ಹೆಚ್ ನಾಯಕ ವಕೀಲರ ಮನೆಗೆ ಹೋಗಿದ್ದಾಗಲಿ ಅಥವಾ ಸಹಿ ಮಾಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಇಂತಹ ವ್ಯಕ್ತಿ ಸದರಿ ದಾಖಲೆಯನ್ನು ಬೆದುಕೊಟ್ಟಿರುತ್ತಾರೆ ಎಂದು ನಮೂದು ಇರುವುದಿಲ್ಲ.

3. ನೀವು ಅಂಕೋಲಾ ನಿವಾಸಿಯಾಗಿರುತ್ತೀರಿ ಎಂದು ತೋರಿಸಲು ಯಾವುದಾದರೂ ದಾಖಲಾತಿಗಳು ಇವೆಯಾ ಎಂದರೆ ಸಾಕ್ಷಿಯು ಚಾಲನಾ ಪರವಾಣಿಗೆ ಇದೆ ಎಂದು

ನುಡಿಯುತ್ತಾರೆ. ಆಧಾರ ಕಾರ್ಡ ಆಗಲಿ ಅಥವಾ ಪಾನ್ ಕಾರ್ಡಿನಲ್ಲಿ ಅಂಕೋಲಾ ವಿಳಾಸ ಇದೆಯಾ ಎಂದರೆ ಇರುತ್ತದೆ ಎಂದು ನುಡಿಯುತ್ತಾರೆ. ಪೊಟೋದಲ್ಲಿರುವ ವ್ಯಕ್ತಿಗಳು ಯಾರು ಸಹ ನಿಮ್ಮಸಮಕ್ಷಮ ಸಹಿಗಳನ್ನುಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದಾದರೂ ಕಾಗದ ಪತ್ರವನ್ನು ಬರೆಯಬೇಕಾದರೆ ಈ ರೀತಿ ಸಹಿ ಮಾಡುತ್ತೇನೆ ಎಂದು ಸಹಿ ಹಾಕುತ್ತೀರಿ ಎಂದರೆ ಸರಿ. ನಿಡಿ-5 ರಲ್ಲಿ ಎಲ್ಲಿಯಾದರೂ ಈ ಬಗ್ಗೆ ಸಾಕ್ಷಿ ಎಂದು ಬೆರಳಚ್ಚು ಮಾಡಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ-1 ಮತ್ತು 5 ನ್ನು ಟೈಪಿಂಗ್ ಮಾಡಲಾಗಿದ್ದು, ಗಣಕೀಕೃತ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಟೈಪಿಂಗ್ ಮಾಡಬೇಕಾದರೆ ಈ ಬಗ್ಗೆ ಸಾಕ್ಷಿ ಮಾಡಿರುತ್ತೀರಿ ಎಂದು ನಮೂದು ಇದೆಯಾ ಎಂದರೆ ಸಾಕ್ಷಿಯು ಕೈಯಿಂದ ಸಾಕ್ಷಿಗಳು ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಹಾಗೂ 1 ಮತ್ತು 2ನೇ ಪ್ರತಿವಾದಿಯರು ಸೇರಿಕೊಂಡು ನಂತರ ಕೈಯಿಂದ ಬರೆದಿರುತ್ತೀರಿ ಎಂದರೆ ಸರಿಯಲ್ಲ. ನೀವು 1 ಮತ್ತು 2ನೇ ಪ್ರತಿವಾದಿಯರ ಮಾತನ್ನು ಕೇಳಿಕೊಂಡು ಕಡೆಯದಾಗಿ ನೀವು ನಿಮ್ಮ ಸಹಿಯನ್ನು ಸೇರಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರಿಗೆ 1 ಮತ್ತು 2ನೇ ಪ್ರತಿವಾದಿಯರು ಹಣವನ್ನು ಕೊಟ್ಟಿದ್ದೂ ಇಲ್ಲ ಹಾಗೂ ಜಮೀನನ್ನು ಮಾರಾಟ ಮಾಡಿ ಕೊಡುತ್ತೇನೆ ಎಂದು ಬರೆದುಕೊಟ್ಟಿದ್ದೂ ಸಹ ಇರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಯರು ಸೇರಿಕೊಂಡು ವಾದಿಯರ ಹೆಬ್ಬಟ್ಟಿನ ಗುರುತನ್ನು ಪಡೆದುಕೊಂಡು ದಸ್ತಾವೇಜುಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.